# 1 ನೇ ಅಧಿಕ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ, ತುಮಕೂರು

## Spl.C.463/2022

ಚಾಸಾಃ 9 ಪ್ರಾಸಾಃ 8

**ದಿನಾಂಕ.08.06.2026 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು**

| | |
|---|---|
| ಹೆಸರು | ಜಿ.ಶಕುಂತಲ |
| ಗಂಡ/ ತಂದೆಯ ಹೆಸರು | ಆರ್ ರಾಮಕೃಷ್ಣ |
| ವಯಸ್ಸು | 61 ವರ್ಷ |
| ಕೆಲಸ | ನಿವೃತ್ತ ಪಿ ಎಸ್ ಐ |
| ವಾಸಸ್ಥಳ | ತುಮಕೂರು |

**ಮುಖ್ಯ ವಿಚಾರಣೆಃ ಸರ್ಕಾರಿ ಅಭಿಯೋಜಕರಿಂದಃ**

ಮೇ 2020 ರಿಂದ ಆಗಸ್ಟ್ -2022 ರವರಿಗೆ ಬೆಸ್ಕಾಂ ಜಾಗೃತ ಧಳ ಪೊಲೀಸ್ ಠಾಣೆ , ತುಮಕೂರಿನಲ್ಲಿ ಪಿ ಎಸ್ಐ ಆಗಿ ಕರ್ತವ್ಯ ನಿರ್ವಹಿಸಿರುತ್ತೇನೆ.

2) ಈ ಕೇಸ್ ನಲ್ಲಿ ಚಾಸಾ-8 ರವರು ಮಾಡಿದ ತನಿಖೆಯನ್ನು ಪರಿಶೀಲಿಸಿ ಆರೋಪಿತರ ವಿರುದ್ಧ ದೋಷಾರೋಪಣ ಪಟ್ಟಿಯನ್ನು ಸಲ್ಲಿಸಿರುತ್ತೇನೆ.

**<u>ಪಾಟೀ ಸವಾಲು 2 ನೇ ಆರೋಪಿಯ ಪರ ಶ್ರೀ ಹೆಚ್ ವಿ ಆರ್ ವಕೀಲರಿಂದಃ</u>**

3) ಈ ಕೇಸ್ ನಲ್ಲಿ ವಿದ್ಯುತ್ ಕಾಯ್ದೆ 2003 ರ ಕಲಂ.135 ಕ್ಕೆ ಸಂಬಂದಪಟ್ಟಂತೆ ಸಾಕ್ಷ್ಯಧಾರಗಳು ಇದೆಯ, ಇಲ್ಲವೆ ಎಂದು ಪರಿಶೀಲಿಸಿ ಸಾಕ್ಷ್ಯಧಾರಗಳು ಇದಿದ್ದರಿಂದ ದೋಷಾರೋಪಣ ಪಟ್ಟಿಯನ್ನು ಸಲ್ಲಿಸಿರುತ್ತೇನೆ. 2 ನೇ ಆರೋಪಿಯು ಪವರ್ ಸಪ್ಲೈ ಪಡೆಯುವ ಸಮಯದಲ್ಲಿ ಬೆಸ್ಕಾಂ ಇಲಾಖೆಗೆ ಸಂಬಂದಪಟ್ಟ ದಾಖಲಾತಿಗಳನ್ನು ಕೊಟ್ಟಿದ್ದಾರೆ. ಆ ದಾಖಲೆಗಳನ್ನು ನಾನು ದೋಷಾರೋಪಣ ಪಟ್ಟಿ ಸಲ್ಲಿಸುವ ಸಮಯದಲ್ಲಿ ನ್ಯಾಯಲಯಕ್ಕೆ ಸಲ್ಲಿಸಿಲ್ಲ. 2 ನೇ ಆರೋಪಿಯು 2000 ನೇ ಇಸವಿಯಲ್ಲಿ ವಿದ್ಯುತ್ ಸಂಪರ್ಕವನ್ನು ಪಡೆದುಕೊಂಡಿರುತ್ತಾರೆ. 2 ನೇ ಆರೋಪಿಯು ಪವರ್ ಸಪ್ಲೈ ಪಡೆದಾಗನಿಂದ ಈ ಕೇಸ್ ಆಗುವವರಿಗೂ ಹೆಚ್ಚುವರಿ ಡಿಪಾಸಿಟ್ ಮಾಡಿರುವ ಬಗ್ಗೆ ದಾಖಲಾತಿಗಳನ್ನು ನಾನು ಸಂಗ್ರಹಿಸಿರುವುದಿಲ್ಲ .

4) ದೋಷಾರೋಪಣ ಪತ್ರ ಸಲ್ಲಿಸುವ ಪೂರ್ವದಲ್ಲಿ ನಾನು ಸ್ಥಳ ತನಿಖೆಯನ್ನು ಮಾಡಿಲ್ಲ. ಬೆಸ್ಕಾಂ ಜಾಗೃತ ಧಳದ ಪೊಲೀಸ್ ರವರು ಅಧಿಕಾರಿಗಳಿಗೆ 2 ನೇ ಆರೋಪಿಯ ಜಕಾತಿಗೆ (ಟಾರಿಫ್ ) ಸಂಬಂದಪಟ್ಟಂತೆ

ಪತ್ರ ವ್ಯವಹಾರವನ್ನು ಮಾಡಿ ದಾಖಲಾತಿಗಳನ್ನು ಕೇಳಿರುತ್ತಾರೆ. ಬೆಸ್ಕಾಂ ಅಧಿಕಾರಿಗಳು ಸದರಿ ದಾಖಲಾತಿಗಳು ಕಚೇರಿ ಸ್ಥಳಾಂತರಿಸುವ ಸಮಯದಲ್ಲಿ ಮಿಸ್ ಪ್ಲೇಸ್ ಆಗಿದೆಯೆಂದು ಲಿಖಿತವಾಗಿ ಹೇಳಿದ್ದಾರೆ ಅಂದರೆ ಸರಿ. ದಾಖಲಾತಿಗಳನ್ನು ಒದಗಿಸದೇ ಇದ್ದರಿಂದ ಅಧಿಕಾರಿಗಳ ವಿರುದ್ಧ ತನಿಖೆ ಮಾಡಬೇಕೆಂದು ದೋಷಾರೋಪಣ ಪಟ್ಟಿಯಲ್ಲಿ ಶಿಫಾರಸ್ಸು ಮಾಡಲಾಗಿದೆ ಅಂದರೆ ಸರಿ. ದಾಖಲಾತಿಗಳನ್ನು ಪರಿಶೀಲನೆ ಮಾಡಿದರೆ 2 ನೇ ಆರೋಪಿಯು ಅವರ ಕಟ್ಟಡವನ್ನು ವಾಣಿಜ್ಯ ಉದ್ದೇಶಕ್ಕೆ ಬಳಸುತ್ತಿದ್ದಾರೆಂದು ಯಾವುದೇ ಅಂಶಗಳು ಕಂಡು ಬರುವುದಿಲ್ಲ ಅಂದರೆ ಸರಿಯಲ್ಲ. ಸದರಿ ಕಟ್ಟಡದಲ್ಲಿ ಯಾವುದೇ ಹಾಸ್ಟೆಲ್ ಅಥವಾ ಪಿಜಿ ನಡೆಸುತ್ತಿರಲಿಲ್ಲ, ಅದನ್ನು ವಾಸಕ್ಕೆ ಬಳಸುತ್ತಿದ್ದರು ಸಹ ಯಾವುದೇ ದಾಖಲಾತಿಗಳನ್ನು ಪರಿಶೀಲನೆ ಮಾಡದೇ ದೋಷಾರೋಪಣ ಪಟ್ಟಿಯನ್ನು ಸಲ್ಲಿಸಿರುತ್ತೇನೆ ಅಂದರೆ ಸ ರಿಯಲ್ಲ. 2 ನೇ ಆರೋಪಿಯು ಯಾವುದೇ ತಪ್ಪು ಮಾಡದಿದ್ದರು ಸಹ ಸುಳ್ಳು ದೋಷಾರೋಪಣಪಟ್ಟಿಯನ್ನು ಸಲ್ಲಿಸಿರುತ್ತೀರಿ ಅಂದರೆ ಸರಿಯಲ್ಲ.

**<u>ಪಾಟೀ ಸವಾಲು 1 ನೇ ಆರೋಪಿಯ ಪರ ಶ್ರೀ ಎನ್ ಸಿ ಜಿ ವಕೀಲರಿಂದಃ</u>**

5) ಸ್ಥಳಕ್ಕೆ ಹೋಗಿಲ್ಲ ಅಂದರೆ ಸರಿ. ಯಾವುದೇ ಸಾಕ್ಷ್ಯಧಾರಗಳು ಇಲ್ಲದಿದ್ದರು ಸಹ 1 ನೇ ಆರೋಪಿಯ ವಿರುದ್ದ ಸುಳ್ಳು ದೋಷಾರೋಪಣ ಪಟ್ಟಿಯನ್ನು ಸಲ್ಲಿಸಿರುತ್ತೀರಿ ಅಂದರೆ ಸರಿಯಲ್ಲ.

( 2 ನೇ ಆರೋಪಿಯ ಪರ ವಕೀಲರು ಮಾಡಿದ ಪಾಟೀ ಸವಾಲನ್ನು 1 ನೇ ಆರೋಪಿ ಪರ ವಕೀಲರು ಅನುಸರಿಸುತ್ತಾರೆ. )

ಮರುವಿಚಾರಣೆಃ ಇಲ್ಲ

(ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)

ಓ.ಹೇ.ಕೇ.ಸರಿ ಇದೆ

1 ನೇ ಅಧಿಕ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು
ತುಮಕೂರು.